## ನಾಂದಿಪದ



ಕಲೆ: ಎಸ್.ವಿ. ಹೂಗಾರ್

# ಸ್ಮೃತಿಚಿತ್ರಗಳ ಜಂಬೂಸವಾರಿ

**ಇದು** ಸಾಂಸ್ಕೃತಿಕ ನೆನಪುಗಳ ಜಂಬೂಸವಾರಿಯ ಸಂಚಿಕೆ. ಅಕ್ಟೋಬರ್, ಗಾಂಧಿಸ್ಮೃತಿಗಳ ತಿಂಗಳು. ಮಹಾತ್ಮನ ನೆನಪುಗಳೊಂದಿಗೆ ಅನೇಕ ಮಹಾನುಭಾವರ ನೆನಪುಗಳು ಈ ಸಂಚಿಕೆಯಲ್ಲಿ ನೆರೆದಿವೆ. ಸುಮತೀಂದ್ರ ನಾಡಿಗರ ಕುರಿತು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಒಡನಾಟದ ನೆನಪುಗಳು 'ಕವಿ ಕಂಡಂತೆ ಕವಿ'ಯ ವಿಶಿಷ್ಟ ಬಿಂಬಗಳು. ತ್ರಿಮೂರ್ತಿಗಳಾದ ಪ್ರೊ. ಜಿ. ವೆಂಕಟಸುಬ್ಬಯ್ಯ, ಎ.ಎನ್. ಮೂರ್ತಿರಾವ್, ನಿಟ್ಟೂರು ಶ್ರೀನಿವಾಸ ರಾವ್ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಜೀವಜಲದಂತೆ ಕೆಲಸ ಮಾಡಿದ ದಿನಗಳ ನೆನಪು ಹಾಗೂ ಆಗಸ್ಟ್‌ನಲ್ಲಿ ನಿಧನರಾದ ಭಾರತೀಯ ಇಂಗ್ಲಿಷ್ ಸಾಹಿತ್ಯದ ಪ್ರಮುಖ ಕವಿ ಜಯಂತ್ ಮಹಾಪಾತ್ರರ ಕುರಿತ ನೆನಪುಗಳ ಪುಟ್ಟ ಸ್ಮೃತಿಚಿತ್ರ ಈ ಸಂಚಿಕೆಯಲ್ಲಿವೆ. ಇವೆಲ್ಲಕ್ಕೆ ಕಲಶಪ್ರಾಯವಾಗಿ ಮಣಿಪುರಿ ನೃತ್ಯವನ್ನು ಜೀವಿಸುತ್ತಿರುವ ಹಿರಿಯ ವಿದ್ವಾಂಸೆ ದರ್ಶನಾ ಜವೇರಿ ಅವರು, ತಮ್ಮ ನೆನಪುಗಳ ಓಣಿಗಳಲ್ಲಿ ಸಹೃದಯರನ್ನು ಕೈ ಹಿಡಿದು ನಡೆಸುವ ಮಾತುಕತೆ ಅಕ್ಟೋಬರ್ ಸಂಚಿಕೆಯ ಮತ್ತೊಂದು ವಿಶೇಷ. ಈ ಎಲ್ಲ ಸ್ಮೃತಿಚಿತ್ರಗಳು ಒಂದಾನೊಂದು ಕಾಲದ ಸುಂದರ ಸ್ವಪ್ನಗಳ ನೇವರಿಕೆಯಾದರೂ, ಇವು ವರ್ತಮಾನದಲ್ಲಿ ನಮಗೆ ಅಗತ್ಯವಾದ ಕಿವಿಮಾತೊಂದನ್ನು ಹೇಳುತ್ತಿವೆ. ಸ್ವಸ್ಥ ಸಮಾಜ ರೂಪುಗೊಳ್ಳುವಲ್ಲಿ ಕಲೆ-ಸಾಹಿತ್ಯದ ಪಾತ್ರ ಮುಖ್ಯವಾದುದು ಎನ್ನುವ ಒಳನೋಟವದು. ಸಮಾಜವೊಂದರ ಆರೋಗ್ಯ ಕೆಟ್ಟಿದೆಯೆಂದರೆ, ಆ ಅನಾರೋಗ್ಯ ಕಲೆ-ಸಾಹಿತ್ಯಕ್ಕೆ ಸಂಬಂಧಿಸಿದ್ದೂ ಹೌದು. ಹಾಗಾಗಿ, ಸ್ವಸ್ಥ ಸಮಾಜವನ್ನು ರೂಪಿಸುವ ಪ್ರಯತ್ನ, ಕಲೆ-ಸಾಹಿತ್ಯವನ್ನು ಸಮೃದ್ಧಗೊಳಿಸುವ, ಅರ್ಥಪೂರ್ಣಗೊಳಿಸುವ ಪ್ರಯತ್ನವೂ ಆಗಿದೆ. ಗತವೈಭವದ ರೂಪದಲ್ಲಿ ಕಾಣಿಸುವ ಈ ಆರ್ದ್ರ ನೆನಪುಗಳು, ಸಮಕಾಲೀನ ಸಾಹಿತ್ಯ-ಕಲೆಗಳ ಸ್ವರೂಪ ಯಾವ ಬಗೆಯದಿರಬೇಕೆನ್ನುವುದನ್ನೂ ಕಾಣಿಸುವಂತಿವೆ. 'ಗಾಂಧಿ ಜಯಂತಿ' ಪ್ರಭೆಯ ಈ ಸಂಚಿಕೆ ಅಪೂರ್ವ ಸಾಂಸ್ಕೃತಿಕ ಸ್ಮೃತಿಗಳ ಸಂಕಲನವಾಗಿರುವಂತೆ, ಈ ನೆನಪುಗಳು ವರ್ತಮಾನದಲ್ಲಿ ನಾವು ಸಾಗಬೇಕಾದ ದಾರಿಗಳನ್ನು ನಿಚ್ಚಳಗೊಳಿಸುವಂತಿವೆ. ಬಾಪು-ಬಸವಣ್ಣನವರ ಮುಖಾಮುಖಿಯ ಕುರಿತ ಸಿಂಪಿ ಲಿಂಗಣ್ಣನವರ ಬರಹ, ಭರತಭೂಮಿ ಕಂಡ ಎರಡು ಅಸಾಧಾರಣ ಚೇತನಗಳನ್ನು ಒಟ್ಟಿಗೆ ನೋಡುವ ಸೃಜನಶೀಲ ಪ್ರಯತ್ನವಾಗಿದೆ. ಈ ಸಂಚಿಕೆಯ ಕಥೆ-ಪ್ರಬಂಧ-ಕವಿತೆಗಳು ಕೂಡ ವರ್ತಮಾನವನ್ನು ಮಾನವೀಯಗೊಳಿಸುವ ಸೃಜನಶೀಲ ಹಂಬಲವಾಗಿದೆ. ಈ ಸ್ಮೃತಿಚಿತ್ರಗಳೊಂದಿಗೆ ಸಹೃದಯರ ನೆನಪುಗಳೂ ಸೇರಿಕೊಂಡಾಗ ಸಾಂಸ್ಕೃತಿಕ ಜಂಬೂಸವಾರಿ ಮತ್ತಷ್ಟು ಕಳೆಗಟ್ಟುವುದು. ಇನ್ನು ನೀವುಂಟು, ನೆನಪುಗಳುಂಟು.

**ಮಯೂರ ಬಳಗ**

editormy@mayura.co.in